ಶುಭಂಕರ್ ಫೋನ್ ಎತ್ತಿ ಅಧೀರತೆಯಿಂದ ನಂಬರ್ ಡೈಲ್ ಮಾಡಿದ. ಇವನು ಯಾರ ಜೊತೆ ಏನು ಮಾತಾಡುತ್ತಿದ್ದಾನೆ ಅನ್ನುವುದು ಅರ್ಥವಾಗದೆ ಚಹಾ ತೆಗೆದುಕೊಂಡು ಹೊರಬರುವಷ್ಟರಲ್ಲಿ ಅವನು ಬಚ್ಚಲು ಮನೆ ಹೊಕ್ಕಿಯಾಗಿತ್ತು. 'ನಾನು ಸ್ನಾನ ಮಾಡಿ ಬರುತ್ತೇನೆ ನೀನು ಏನಾದರೂ ತಿಂಡಿ ಮಾಡಿಡು' ಅಂದ ಅವನ ಮಾತು ಮಾತ್ರ ಅವಳಿಗೆ ಕೇಳಿತು.

'ನಿನ್ನೆ ರಾತ್ರಿ ತಡವಾಗಿ ಬಂದಿದ್ದೀರಿ, ಸುಸ್ತಾಗಿರುತ್ತೆ, ಸ್ವಲ್ಪ ಮಲಗೆದ್ದು ಹೋಗಿ' ಎಂದು ವಿದ್ಯಾ ತನ್ನ ಮಾತು ಮುಗಿಸುವಷ್ಟರಲ್ಲಿ ಬಚ್ಚಲಿನ ಬಾಗಿಲು ಹಾಕಿಯಾಗಿತ್ತು.

ಇಡೀ ದಿನ ಟೀವಿಯ ಮೇಲೆ ಮೀತಾ ಲೋಲಗೇಕರ್‌ಳ ಆರೋಗ್ಯದ ಬಗ್ಗೆ ಟೀವಿಯಲ್ಲಿ ವಾರ್ತೆಗಳು ಬರುತ್ತಿದ್ದವು. ಮುಂಬಯಿ ಇಲ್ಲವೇ, ದಿಲ್ಲಿಗೆ ಆಕೆಯನ್ನು ಹೊತ್ತೊಯ್ಯುವುದು ಆಕೆಯ ಆರೋಗ್ಯದ ದೃಷ್ಟಿಯಿಂದ ಅಪಾಯಕರವಾಗಿತ್ತು. ಡಾಕ್ಟರಗಳು ತಮ್ಮ ವತಿಯಿಂದ ಎಲ್ಲ ರೀತಿಯ ಉಪಚಾರಗಳನ್ನು ಮಾಡುತ್ತಲೇ ಇದ್ದರು. ಭಾರತದಾದ್ಯಂತ ಹರಡಿರುವ ಆಕೆಯ ಅಭಿಮಾನಿಗಳು ಆಕೆಯ ಆರೋಗ್ಯ ಸುಧಾರಿಸಲೆಂದು ಕಳಿಸಿದ ಸಂದೇಶಗಳನ್ನು ನ್ಯೂಸ್ ಚಾನೆಲ್‌ನವರು ದಿನವಿಡಿ ತೋರಿಸುತ್ತಿದ್ದರು.

ಸಾಯಂಕಾಲ ನಾಲ್ಕು ಗಂಟೆಗೆ ಶುಭಂಕರ ಫೋನ್ ಮಾಡಿದ್ದ. ಅವನ ಮಾತಿನಲ್ಲಿ ದುಃಖದ ಇಲ್ಲವೆ ವೇದನೆಯ ಯಾವುದೇ ಸುಳಿವಿರಲಿಲ್ಲ. ಐದು ಗಂಟೆಗೆ ಆಫೀಸಿನಿಂದಲೇ ಅವನು ಸ್ಲೋನ್ ಆಸ್ಪತ್ರೆಗೆ ಮೀತಾಳನ್ನು ನೋಡಲು ಹೋಗಿ ರಾತ್ರಿ ತಡವಾಗಿ ಬರುವವನಿದ್ದ. ಸಾತ್ವಿಕ್ ತನ್ನ ಜೊತೆಯಿರುವುದರಿಂದ ಚಿಂತಿಸಬೇಡವೆಂದು ವಿದ್ಯಾಗೆ ಹೇಳಿ ಅವಳಿಗೆ ಮಾತಾಡುವ ಅವಕಾಶವನ್ನೇ ಕೊಡದೆ ಫೋನ್ ಇಟ್ಟುಬಿಟ್ಟ.

ರಾತ್ರಿ ಒಂಬತ್ತು ಗಂಟೆಗೆ ಊಟ ಮುಗಿಸಿ ವಿದ್ಯಾ ಮಗಳು ಮಿತಾಲಿಯಿಂದ ಹೋಂವರ್ಕ್ ಬರೆಸಿಕೊಳುತ್ತಿರುವಾಗಲೆ ಹೊರಗಿನ ಕೋಣೆಯ

